
# ಕತ್ತಲೆ ಖಂಡದ ದೀಪಧಾರಿ

ಚರಿತ್ರೆಯ ಪಠ್ಯದಲ್ಲಿ 'ಕತ್ತಲೆಯ ಖಂಡ' ಎಂದೇ ಬಣ್ಣಿಸಲಾಗುವ ಆಫ್ರಿಕಾ, ಕಳೆದ ವಾರ ನೊಬೆಲ್ ಪ್ರಶಸ್ತಿ ಘೋಷಣೆಯಾದಾಗ ಹೊಂಬಣ್ಣ ಹೊದ್ದುಕೊಂಡು ಮಿರಿ ಮಿರಿ ಮಿಂಚಿತು. ಕಾರಣ – ತಾಂಜಾನಿಯಾ ಮೂಲದ ಕಾದಂಬರಿಕಾರ ಅಬ್ದುಲ್ ರಜಾಕ್ ಗುರ್ನಾ ಪ್ರಸಕ್ತ ಸಾಲಿನ ನೊಬೆಲ್ ಸಾಹಿತ್ಯ ಪುರಸ್ಕಾರಕ್ಕೆ ಭಾಜನರಾಗಿದ್ದು. ಜಗತ್ತಿನ ಬೇರೆ ಯಾವ ಭಾಗವನ್ನೂ ಪ್ರಭಾವಿಸದಷ್ಟು ವಸಾಹತುಶಾಹಿ ವ್ಯವಸ್ಥೆ ಆಫ್ರಿಕಾ ಖಂಡದ ಸಾಹಿತ್ಯವನ್ನು ಪ್ರಭಾವಿಸಿದೆ. ಅಂತೆಯೇ ಅಲ್ಲಿನ ವಲಸಿಗ ಸಮುದಾಯದ ಒಡಲಾಳದ ಸಂಕಟದ ಕಥನಗಳು ಸಹ ಕರುಳನ್ನು ಕಿವುಚುವಂಥವು. ಗುರ್ನಾ ಅವರ ಸಾಹಿತ್ಯದ ವಸ್ತು ಕೂಡ ಈ ನೋವು–ಸಂಕಟಗಳೇ ಆಗಿವೆ.

ಅರಬ್ ನೆಲದಿಂದ ಆಫ್ರಿಕಾ ಖಂಡಕ್ಕೆ ವಲಸೆ ಬಂದ ಜನರ ಬದುಕು ಹೇಗೆ ಬಿರುಗಾಳಿಗೆ ಸಿಕ್ಕ ತರಗಿನಂತೆ ತೂರಿಕೊಂಡು ಹೋಯಿತು, ವಸಾಹತು ನೀತಿಯ ದಾಸ್ಯ ಅವರನ್ನು ಹೇಗೆ ಕಾಡಿತು, ಅವರ ಸಾಂಸ್ಕೃತಿಕ ತಳಮಳಗಳು ಹೇಗಿದ್ದವು ಮತ್ತು ಅವರು ಅನುಭವಿಸಿದ ಅಸ್ಮಿತೆಯ ಅಯೋಮಯ ಎಂತಹದ್ದು ಎನ್ನುವುದನ್ನು ಗುರ್ನಾ ಅವರ ಕಥೆಗಳು ಢಾಳಾಗಿ ಕಟ್ಟಿಕೊಡುತ್ತವೆ. ಚಿನುವಾ ಅಚಿಬೆ, ಗೂಗಿ ವಾ ಥಿಯಾಂಗೊ ಅವರಂತೆ ಗುರ್ನಾ ಅವರ ಸಾಹಿತ್ಯ ಕೂಡ ಗುಂಡಿಗೆಯ ರಕ್ತದ ಬಿಸಿಯನ್ನು ಅಕ್ಷರಕ್ಕೆ ಇಳಿಸುವಷ್ಟು ಪ್ರಭಾವಶಾಲಿಯಾಗಿದೆ. ಆದ್ದರಿಂದಲೇ 'ವಲಸಿಗರ ಮೇಲಿನ ವಸಾಹತುಶಾಹಿ ಪರಿಣಾಮಗಳನ್ನು ಚಿತ್ರಿಸುವಾಗ ರಾಜಿಯಾಗದ ದಿಟ್ಟತನವನ್ನು ಅವರ ಕೃತಿಗಳಲ್ಲಿ ಕಾಣಬಹುದು' ಎಂದು ನೊಬೆಲ್ ಪ್ರಶಸ್ತಿ ಆಯ್ಕೆ ಸಮಿತಿ ಅಭಿಪ್ರಾಯಪಟ್ಟಿದೆ.

ಗುರ್ನಾ ಅವರು ಹತ್ತು ಕಾದಂಬರಿಗಳನ್ನು ಬರೆದಿದ್ದಾರೆ. 'ಮೆಮೊರಿ ಆಫ್ ಡಿಪಾರ್ಚರ್', 'ಪಿಲಿಗ್ರಿಮ್ಸ್ ವೇ', 'ಬೈ ದ ಸೀ', 'ಡಸರ್ಷನ್', 'ಗ್ರೇವಿಯಲ್ ಹಾರ್ಟ್' ಮತ್ತು 'ಆಫ್ಟರ್‌ಲೈವ್ಸ್' ಅವುಗಳಲ್ಲಿ ಪ್ರಮುಖವಾದವು. ಅವರ 'ಪ್ಯಾರಡೈಸ್' ಕೃತಿ 1994ರಲ್ಲಿ ಬೂಕರ್ ಪ್ರಶಸ್ತಿಯ ಅಂತಿಮ ಸುತ್ತಿನಲ್ಲಿ ಸ್ಥಾನ ಪಡೆದಿತ್ತು. ಐದು ದಶಕಗಳಿಂದ ಇಂಗ್ಲೆಂಡ್‌ನಲ್ಲಿ ನೆಲೆಸಿರುವ ಅವರು ಕೆಂಟ್ ವಿಶ್ವವಿದ್ಯಾಲಯದಲ್ಲಿ ಸಾಹಿತ್ಯ



■ ಪ್ರವೀಣ ಕುಲಕರ್ಣಿ

ವಿಭಾಗದ ಪ್ರಾಧ್ಯಾಪಕರಾಗಿದ್ದರು. ಅವರು ನೊಬೆಲ್ ಪುರಸ್ಕಾರಕ್ಕೆ ಪಾತ್ರರಾದ ಆಫ್ರಿಕಾದ ಐದನೇ ಸಾಹಿತಿಯೂ ಹೌದು.

ವಲಸಿಗರ ಬದುಕಿನ ಕಡುಕಷ್ಟದ ದಟ್ಟ ಚಿತ್ರಣವನ್ನು 'ಪ್ಯಾರಡೈಸ್' ತುಂಬಾ ಗಾಢವಾಗಿ ಕಟ್ಟಿಕೊಟ್ಟಿದೆ. ಸಮುದ್ರದ ಒಂದು ತೀರದಿಂದ ಮತ್ತೊಂದು ತೀರಕ್ಕೆ ದಿಕ್ಕು ದಿಸೆಯಿಲ್ಲದೆ ಸಾಗುವ ಬದುಕಿನ ನೋಟಗಳು ಆರ್ದ್ರತೆಯಿಂದ ಕೂಡಿದ್ದು, ನೇರವಾಗಿ ಹೃದಯವನ್ನು ತಟ್ಟುತ್ತವೆ. ಸಮುದ್ರ ತೀರದ ಮರಳಿನಂತೆಯೇ ಈ ವಲಸಿಗರ ನೆಲೆಗಳೂ ಸದಾ ಕುಸಿಯುತ್ತಿರುತ್ತವೆ. ಹೇಳಿಕೊಳ್ಳಲೊಂದು ಸ್ವಂತ ನೆಲವಿಲ್ಲದವರಿಗೆ ಎಲ್ಲಿಯ ಅಸ್ಮಿತೆ, ಎಲ್ಲಿಯ ಸಂಸ್ಕೃತಿ? ಅದರ ಮೇಲೆ ವಸಾಹತು ಸಂಸ್ಕೃತಿಯ ದೌರ್ಜನ್ಯದ ಬರೆ ಬೇರೆ! ಆಫ್ರಿಕಾದ ವಲಸಿಗ ಸಮುದಾಯ ಅನುಭವಿಸಿದ ಇಂತಹ ಕರಾಳ ನೆನಪುಗಳನ್ನು ಮರೆಯಲು ಬಯಸಿದಷ್ಟೂ ಪುಟಿದೆದ್ದು ನಿಲ್ಲುತ್ತವೆ. ಹೌದು, ಗುರ್ನಾ ಅವರ ಕಾದಂಬರಿಗಳಲ್ಲಿ ಅಂತಹ ನೆನಪುಗಳ ಮೆರವಣಿಗೆಗಳೇ ಹೊರಡುತ್ತವೆ.

ಜಾಂಜಿಬಾರ್ ದ್ವೀಪ ಸಮೂಹದಲ್ಲಿ 1948ರ ಡಿಸೆಂಬರ್‌ನಲ್ಲಿ ಗುರ್ನಾ ಜನಿಸಿದರು. ಆಗ ಅದು ಬ್ರಿಟಿಷರ ವಶದಲ್ಲಿತ್ತು. ಈ ದ್ವೀಪಸಮೂಹವು 1963ರಲ್ಲಿ ಸ್ವಾತಂತ್ರ್ಯವನ್ನು ಗಳಿಸಿದ ಮೇಲೆ ಅರಬ್ ಅಲ್ಪಸಂಖ್ಯಾತ ಮತ್ತು ಆಫ್ರಿಕಾದ ಬಹುಸಂಖ್ಯಾತ ಸಮುದಾಯಗಳ ನಡುವಿನ ಆಂತರಿಕ ಕಲಹದಿಂದ ತತ್ತರಿಸಿಹೋಗಿತ್ತು. ಸ್ವಾತಂತ್ರ್ಯ ಸಿಕ್ಕ ಮರುವರ್ಷವೇ ನಡೆದ ಜಾಂಜಿಬಾರ್ ಕ್ರಾಂತಿಯು ಅಲ್ಲಿನ ದೊರೆ ಸುಲ್ತಾನ್ ಜಮ್ಶಿದ್ ಬಿನ್ ಅಬ್ದುಲ್ಲಾ ಅವರನ್ನು ಅಧಿಕಾರದ ಪಟ್ಟದಿಂದ ಕೆಳಗಿಳಿಸಿ, ಇತಿಹಾಸದ ಕಸದ ಬುಟ್ಟಿಗೆ ಎಸೆಯಿತು.

ಮುಂದಿನ ದಿನಗಳಲ್ಲಿ ಜಾಂಜಿಬಾರ್ ಪ್ರದೇಶವೇ ತಾಂಜಾನಿಯಾ ಗಣರಾಜ್ಯವಾಗಿ ಹೊರಹೊಮ್ಮಿತು. ಆಗ ನಡೆದ ಕ್ರಾಂತಿಯಲ್ಲಿ 20 ಸಾವಿರಕ್ಕೂ ಅಧಿಕ ಮಂದಿ ಜೀವ ತೆರಬೇಕಾಯಿತು. ಮಾನವ ಚರಿತ್ರೆಯಲ್ಲಿ ನಡೆದ ಅನಾಗರಿಕ ಸಂಘರ್ಷದ ಬಹುದೊಡ್ಡ ನರಮೇಧಗಳಲ್ಲಿ ಜಾಂಜಿಬಾರ್ ಕ್ರಾಂತಿಯೂ ಒಂದೆನಿಸಿದೆ. ಯುವಕನಾಗಿ ಈ ಎಲ್ಲ ಘಟನೆಗಳಿಗೆ ಸಾಕ್ಷಿಯಾದ ಗುರ್ನಾ, ತಮ್ಮ 18ನೇ ವಯಸ್ಸಿನಲ್ಲಿ ಇಂಗ್ಲೆಂಡ್‌ಗೆ ವಲಸೆಹೋದರು. ಮುಂದೆ ಅಲ್ಲಿಯೇ ನೆಲೆನಿಂತರು. ಗುರ್ನಾ ಅವರದು ಸ್ವಾಹಿಲಿ ಮಾತೃಭಾಷೆ. ಇಂಗ್ಲೆಂಡ್‌ನ ಪರಿಸರ ಅವರಲ್ಲಿ ಇಂಗ್ಲಿಷ್ ಜ್ಞಾನವನ್ನೂ ತುಂಬಿತು. ಕೆಂಟ್ ವಿಶ್ವವಿದ್ಯಾಲಯದಿಂದ ಪಿಎಚ್‌.ಡಿ ಪದವಿ ಪಡೆದ ಅವರು, ಅಲ್ಲಿಯೇ ಉಪನ್ಯಾಸಕರಾಗಿ ನೇಮಕಗೊಂಡರು. ಮುಂದಿನದೆಲ್ಲ ಈಗ ಚರಿತ್ರೆ.

'ಓಹೋ ತುಂಬಾ ಖುಷಿಯಾಗುತ್ತಿದೆ. ಇದೊಂದು ದೊಡ್ಡ ಪ್ರಶಸ್ತಿ. ಆಯ್ಕೆ ಸುತ್ತಿನಲ್ಲಿ ಎಂತೆಂಥ ಮಹಾನ್ ಸಾಹಿತಿಗಳ ಹೆಸರುಗಳಿದ್ದವು. ನನಗೆ ಪುರಸ್ಕಾರ ಸಿಕ್ಕಿದ್ದನ್ನು ಇನ್ನೂ ಜೀರ್ಣಿಸಿಕೊಳ್ಳಲು ಆಗುತ್ತಿಲ್ಲ. ವಲಸೆಯ ಬಿರುಗಾಳಿಯಲ್ಲಿ ನೋವು ಅನುಭವಿಸಿದವರಿಗೆಲ್ಲ ಈ ಪ್ರಶಸ್ತಿ ಅರ್ಪಿತ' ಎಂದು ವಿನೀತರಾಗಿ ಹೇಳಿದ್ದಾರೆ ಗುರ್ನಾ. 'ನನ್ನ ಎದೆಯಾಳದ ಸಂಕಟವೇ ನನ್ನ ಕೃತಿಗಳಲ್ಲಿ ಕಥೆಯಾಗಿವೆ' ಎಂದೂ ಹೇಳಿದ್ದಾರೆ. ಪಕ್ಷಿ ಎತ್ತರಕ್ಕೆ ಹಾರಿದಂತೆ ಅದರ ದೃಷ್ಟಿ ವಿಶಾಲವಾಗುತ್ತಾ ಹೋಗುತ್ತದಂತೆ. ಎತ್ತರಕ್ಕೆ ಬೆಳೆದಂತೆ ಗುರ್ನಾ ಅವರ ವ್ಯಕ್ತಿತ್ವ ಮತ್ತಷ್ಟು ಪಕ್ವಗೊಳ್ಳುತ್ತಾ ಹೋಗುತ್ತಿದೆ ಎನ್ನುವುದಕ್ಕೆ ಅವರ ಮಾತುಗಳೇ ಸಾಕ್ಷಿಯಾಗಿವೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65